# *Form No.4.*

# *Deposition Sheet( R.P.52)*

ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

**CC :11/2024**

**CW-13**

**PW-12**

| | | |
|---|---|---|
| ಸಾಕ್ಷಿಯ ಹೆಸರು | ಃ | ನವೀನ್ ಆಳ್ವಾ |
| ತಂದೆ ಹೆಸರು | ಃ | ಸೀರಿಲ್ ಆಳ್ವಾ |
| ಪ್ರಾಯ | ಃ | 48 ವರ್ಷ |
| ಉದ್ಯೋಗ | ಃ | ಮೆಕಾನಿಕ್ |
| ವಾಸ | ಃ | ಕಾರ್ಕಳ |

ದಿನಾಂಕ **: 02.05.2025** ರಂದು ಪಿಡಬ್ಲ್ಯೂ - 12/ಸಿಡಬ್ಲ್ಯೂ - 13 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಹಿರಿಯ ಸ.ಸ.ಅ. ರವರಿಂದಃ

ಈಗ ನನಗೆ ತೋರಿಸಿದ ಮಹಜರಿನಲ್ಲಿ ನನ್ನ ಸಹಿ ಇದ್ದು, ಸದರಿ ಮಹಜರನ್ನು ನಿಪಿ - 14 ಎಂದು, ನನ್ನ ಸಹಿಯನ್ನು ನಿಪಿ - 14(ಎ) ಎಂದು ಗುರುತಿಸಲಾಯಿತು. ಈಗ ತೋರಿಸಿದ ಫೋಟೋದಲ್ಲಿ ನಾನು ಇದ್ದು, ಸದರಿ ಫೋಟೋವನ್ನು ನಿಪಿ - 15 ಎಂದು ಗುರುತಿಸಲಾಯಿತು. ಸದರಿ ಮಹಜರನ್ನು ಸುಮಾರು 5 ವರ್ಷದ ಹಿಂದೆ ಅಜೆಕಾರು ಪೋಲೀಸ್ ಠಾಣೆಯಲ್ಲಿ ಮಾಡಲಾಗಿರುತ್ತದೆ. ಸದರಿ ಮಹಜರನ್ನು

CC 11/2024
CW13
PW12

ಚಾ.ಸಾ. 6 ರವರಿಗೆ ಸೇರಿದ ಗೇರು ಬೀಜದ ಫ್ಯಾಕ್ಟರಿಯಲ್ಲಿ ಕಳ್ಳತನವಾದ ಗೇರುಬೀಜಗಳನ್ನು ನ್ಯಾಯಾಲಯದ ಆದೇಶದ ಪ್ರಕಾರ ನಮ್ಮ ಸಮಕ್ಷಮ ಮಹಜರು ಮಾಡಿರುತ್ತಾರೆ. ಆ ಸಮಯದಲ್ಲಿ ಚಾ.ಸಾ. 1 ರವರು ಹಾಜರಿದ್ದು, ಮಹಜರನ್ನು ಮಾಡಿ ಚಾ.ಸಾ 1 ರವರಿಗೆ 125 ಕೆ.ಜಿ. ಗೇರು ಬೀಜಗಳನ್ನು 4 ಬ್ಯಾಗು ಗಳಲ್ಲಿ ಹಸ್ತಾಂತರಿಸಿರುತ್ತಾರೆ. ಆ ಸಮಯದಲ್ಲಿ ನಿಪಿ - 15 ಪೋಟೋಗಳನ್ನು ತೆಗೆಯಲಾಗಿದೆ.

<u>ಪಾಟೀ ಸವಾಲುಃ</u> ಪಿ.ಎ.ಎಸ್. 1 ನೇ ಆರೋಪಿತರ ಪರ ವಕೀಲರಿಂದಃ

ಚಾ.ಸಾ. 6 ರವರು ಪ್ರವೀಣ್ ಆಳ್ವಾ ನನ್ನ ತಮ್ಮ. ಅವರು ಫ್ಯಾಕ್ಟರಿಯ ಮಾಲಿಕರಾಗಿರುತ್ತಾರೆ. ಪೋಲೀಸ್ ಠಾಣೆಗೆ ಬರಲು ಚಾ.ಸಾ. 1 ರವರು ಅಂದರೆ ನಮ್ಮ ಫ್ಯಾಕ್ಟರಿಯ ಮ್ಯಾನೇಜರ್ ರವರು ತಿಳಿಸಿರುತ್ತಾರೆ. ನನಗೆ ಯಾವುದೇ ವಿಚಾರ ತಿಳಿಯದೇ ಇದ್ದರು ನನ್ನ ತಮ್ಮನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

CC 11/2024
CW13
PW12

<u>ಪಾಟೀ ಸವಾಲುಃ 2 ಮತ್ತು 3 ನೇ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅನುಮೋದಿಸಿದ್ದಾರೆ.</u>

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

**Sd/-**

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,

ಕಾರ್ಕಳ.